# ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2144(2435) |
| 2 | ಸದಸ್ಯರ ಹೆಸರು | : | ಶ್ರೀ ರಮೇಶ್ ಬಾಬು<br>(ನಾಮ ನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 27.03.2026 |
| 4 | ಉತ್ತರಿಸುವ ಸಚಿವರು | : | ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು. |

****

| | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 3 ವರ್ಷಗಳಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅಡಿಯಲ್ಲಿ ತುಮಕೂರು ಜಿಲ್ಲೆಯಲ್ಲಿ ಯಾವ ಯಾವ ಶಾಸಕರಿಗೆ (MLA & MLC) ರಾಜ್ಯ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆಯಾಗಿದೆ; ಬಿಡುಗಡೆಯಾದ ಅನುದಾನದಲ್ಲಿ ಶಾಸಕರ ಶಿಫಾರಸ್ಸಿನ ಮೇರೆಗೆ ಅಥವಾ ಸೂಚನೆಯ ಮೇರೆಗೆ ಬಿಡುಗಡೆಯಾದ ಅನುದಾನವೆಷ್ಟು; ಉಳಿಕೆ ಇರುವ ಅನುದಾನವೆಷ್ಟು; ಉಳಿಕೆ ಇದ್ದಲ್ಲಿ, ಯಾವ ಯಾವ ಕಾರಣಕ್ಕೆ ಅನುದಾನಗಳನ್ನು ಬಿಡುಗಡೆ ಮಾಡಿರುವುದಿಲ್ಲ. (ವಿವರಗಳನ್ನು ನೀಡುವುದು) | ಕಳೆದ 3 ವರ್ಷಗಳಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ತುಮಕೂರು ಜಿಲ್ಲೆಯ ವ್ಯಾಪ್ತಿಗೊಳಪಡುವ ಮಾನ್ಯ ವಿಧಾನಸಭಾ ಮತ್ತು ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಒಟ್ಟು ರೂ.84.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. |

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಕಂಡಿಕೆ-4.6 ರನ್ವಯ ಮಾನ್ಯ ಶಾಸಕರ ಪದಾವಧಿಯನ್ನಾಧರಿಸಿ, ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

| ಆರ್ಥಿಕ ವರ್ಷದಲ್ಲಿ ಶಾಸಕರಾಗಿದ್ದ ಅವಧಿ | | ನಿಗದಿಪಡಿಸಬೇಕಾದ ಅನುದಾನ |
|---|---|---|
| (ಎ) | ಮೂರು ತಿಂಗಳಿಗಿಂತ ಕಡಿಮೆ | ಇಲ್ಲ |
| (ಬಿ) | ಒಂಬತ್ತು ತಿಂಗಳವರೆಗೆ | ವಾರ್ಷಿಕ ಅನುದಾನದ ಶೇಕಡ 50 ರಷ್ಟು |
| (ಸಿ) | ಒಂಬತ್ತು ತಿಂಗಳಿಗಿಂತ ಹೆಚ್ಚಿನ ಅವಧಿ | ವಾರ್ಷಿಕ ಅನುದಾನದ ಶೇಕಡ 100 ರಷ್ಟು |

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ರೂ.2.00 ಕೋಟಿಗಳನ್ನು ನಿಗದಿಪಡಿಸಲಾಗಿದೆ. ನಿಗದಿಯಾಗಿರುವ ಪೂರ್ಣ ಅನುದಾನವನ್ನು ಬಿಡುಗಡೆ ಮಾಡಿರುವುದರಿಂದ, ಬಾಕಿ ಅನುದಾನ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬಿಡುಗಡೆಯಾಗಿರುವ ಅನುದಾನದ ವಿವರಗಳು ಕೆಳಕಂಡಂತಿದೆ:-

(ರೂ. ಕೋಟಿಗಳಲ್ಲಿ)

| ಕ್ರ ಸಂ | ಕ್ಷೇತ್ರ ಮತ್ತು ಮಾನ್ಯ ಶಾಸಕರ ವಿವರ | 2022-23 | 2023-24 | 2024-25 |
|---|---|---|---|---|
| 1 | ತುಮಕೂರು ನಗರ | 2.00 | 2.00 | 2.00 |
| 2 | ತುಮಕೂರು ಗ್ರಾಮಾಂತರ | 2.00 | 2.00 | 2.00 |
| 3 | ಗುಬ್ಬಿ | 2.00 | 2.00 | 2.00 |
| 4 | ಕುಣಿಗಲ್ | 2.00 | 2.00 | 2.00 |
| 5 | ತಿಪಟೂರು | 2.00 | 2.00 | 2.00 |
| 6 | ಚಿಕ್ಕನಾಯಕನಹಳ್ಳಿ | 2.00 | 2.00 | 2.00 |
| 7 | ಶಿರಾ | 2.00 | 2.00 | 2.00 |
| 8 | ಕೊರಟಗೆರೆ | 2.00 | 2.00 | 2.00 |
| 9 | ಮಧುಗಿರಿ | 2.00 | 2.00 | 2.00 |
| 10 | ಪಾವಗಡ | 2.00 | 2.00 | 2.00 |
| 11 | ತುರುವೇಕೆರೆ | 2.00 | 2.00 | 2.00 |
| 12 | ಶ್ರೀ ರಾಜೇಂದ್ರ ರಾಜಣ್ಣ | 2.00 | 2.00 | 2.00 |
| 13 | ಶ್ರೀ ಕೆ ಎ ತಿಪ್ಪೇಸ್ವಾಮಿ | 2.00 | 2.00 | 2.00 |
| 14 | ಶ್ರೀ ಚಿದಾನಂದ್ ಎಂ ಗೌಡ | 2.00 | 2.00 | 2.00 |
| | ಒಟ್ಟು | 28.00 | 28.00 | 28.00 |

..2

| | ಪ್ರಶ್ನೆ | ಉತ್ತರ |
|---|---|---|
| (ಆ) | ಶಾಸಕರು ತಮ್ಮ ಪ್ರದೇಶಾಭಿವೃದ್ಧಿ ಅನುದಾನ ಬಳಕೆಗೆ ಪತ್ರ ನೀಡಿದ ನಂತರ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಹಣ ಬಿಡುಗಡೆ ಮಾಡಲು ಎಷ್ಟು ಹಂತಗಳಲ್ಲಿ ಅನುಮೋದನೆ ಮಾಡಲಾಗುತ್ತದೆ: ಶಾಸಕರ ಶಿಫಾರಸ್ಸಿನ ನಂತರವೂ ತಾಂತ್ರಿಕ ಕಾರಣ ನೆಪ ಒಡ್ಡಿ ಅಥವಾ ಆಡಿಟ್ ಕಾರಣದ ನೆಪ ನೀಡಿ ಎಷ್ಟು ಹಣ ತಡೆಹಿಡಿಯಲಾಗಿದೆ: ಎಷ್ಟು ಹಣ ಹಿಂದಕ್ಕೆ ಕಳುಹಿಸಲಾಗಿದೆ. (ಪೂರ್ಣ ವಿವರಗಳನ್ನುಒದಗಿಸುವುದು) | ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನ ಬಳಕೆಗೆ ಪತ್ರ ನೀಡಿದ ನಂತರ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಹಣ ಬಿಡುಗಡೆಯನ್ನು ಎರಡು ಹಂತಗಳಲ್ಲಿ ಮಾಡಲಾಗುತ್ತಿದೆ<br><br>ಶಾಸಕರ ಶಿಫಾರಸ್ಸಿನ ನಂತರವೂ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿಗೆ ಅನುಗುಣವಾಗಿಲ್ಲದ ಕಾಮಗಾರಿಗಳನ್ನು ಮಾತ್ರ ಬದಲಾಯಿಸಿ ಕೊಡಲು ಪತ್ರ ವ್ಯವಹರಿಸಲಾಗುತ್ತದೆ.<br><br>ತಾಂತ್ರಿಕ ಮತ್ತು ಆಡಿಟ್ ನೆಪ ಒಡ್ಡಿ ಯಾವುದೇ ಅನುದಾನವನ್ನು ಹಿಂಪಡೆದಿರುವುದಿಲ್ಲ.<br><br>ಅನುದಾನ ಬಳಕೆಗೆ ಸಂಬಂಧಿಸಿದಂತೆ ಕೈಗೊಳ್ಳುವ ಹಂತಗಳ ಪೂರ್ಣ ವಿವರ ಕೆಳಕಂಡಂತಿದೆ:-<br><br>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ-2014ರನ್ವಯ ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿ /ಉಪವಿಭಾಗಾಧಿಕಾರಿಗಳ ಹಂತದಲ್ಲಿ ಅನುಮೋದಿಸಲ್ಪಟ್ಟ ಕಾಮಗಾರಿಗಳಿಗೆ ಅನುಷ್ಠಾನಾಧಿಕಾರಿಗಳಿಂದ ಅಂದಾಜು ಪಟ್ಟಿ ಸ್ವೀಕೃತವಾದ ಕೂಡಲೇ ಆಡಳಿತಾತ್ಮಕ ಅನುಮೋದನೆ ನೀಡುವ ಸಂಬಂಧ ಮಾರ್ಗಸೂಚಿ ಕಂಡಿಕೆ 4.3 ರನ್ವಯ "ತಾಂತ್ರಿಕ ಅನುಮೋದನೆ ಪಡೆದು ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಕಾಮಗಾರಿಗೆ ಮೊದಲನೆಯ ಕಂತಾಗಿ ಶೇಕಡ 75 ರಷ್ಟು ಹಣವನ್ನು ಬಿಡುಗಡೆ ಮಾಡಲಾಗುತ್ತದೆ. ಈ ಅನುದಾನವನ್ನು ಹಣ ವಿನಿಯೋಗ ಪ್ರಮಾಣ ಪಡೆದ ನಂತರ ಹಾಗೂ ಅನುಷ್ಠಾನಾಧಿಕಾರಿಗಳು ಕಾಮಗಾರಿಯನ್ನು ಪೂರ್ತಿಗೊಳಿಸಿದ ಬಗ್ಗೆ ಧೃಢೀಕರಣ ಪತ್ರ ನೀಡಿದ 15 ದಿನಗಳೊಳಗೆ ಜಿಲ್ಲಾಧಿಕಾರಿಗಳು ಉಳಿದ ಶೇಕಡ 25 ರಷ್ಟನ್ನು ಬಿಡುಗಡೆ ಮಾಡಲಾಗುತ್ತದೆ. ಹಣ ಬಿಡುಗಡೆ ಮಾಡುವ ಮುನ್ನ ಕೆಳಗಿನ ಅಂಶಗಳನ್ನು ಪರಿಶೀಲಿಸಲಾಗುತ್ತದೆ.<br><br>• ಕಾಮಗಾರಿಯು ಮಂಜೂರಾದ ಸ್ಥಳದಲ್ಲಿಯೇ ಅನುಷ್ಠಾನಗೊಂಡಿದೆಯೇ?<br>• ಅಂದಾಜು ವೆಚ್ಚಕ್ಕೆ ಅನುಗುಣವಾಗಿ ಅನುಷ್ಠಾನಯಾಗಿದೆಯೇ?<br>• ಕಾಮಗಾರಿಯ ಗುಣಮಟ್ಟ ತೃಪ್ತಿಕರವಾಗಿದೆಯೇ?<br>• ಮೊದಲನೆಯ ಕಂತಿನ ಹಣ ವಿನಿಯೋಗ ಪ್ರಮಾಣ ಪತ್ರ ನೀಡಲಾಗಿದೆಯೇ?<br>ಅನುಷ್ಠಾನಾಧಿಕಾರಿಗಳಿಂದ ಕಾಮಗಾರಿಯನ್ನು ಪೂರ್ಣಗೊಳಿಸಿದ ಬಗ್ಗೆ ಧೃಢೀಕರಣ ಪತ್ರ ನಗದು ಪುಸ್ತಕ ಹಾಗೂ ಅಳತೆ ಪುಸ್ತಕದ (MB) ಉದ್ಧೃತ ಭಾಗವನ್ನು ಪಡೆಯಬೇಕು. |

..3

| | ಪ್ರಶ್ನೆ | ಉತ್ತರ |
|---|---|---|
| (ಇ) | ತುಮಕೂರು ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಶಾಸಕರ ಅನುದಾನಗಳನ್ನು ಶಾಸಕರ ಶಿಫಾರಸ್ಸಿಗೆ ಅನುಗುಣವಾಗಿ ಬಿಡುಗಡೆ ಮಾಡುವ ಸಂಧರ್ಭದಲ್ಲಿ ಆಡಿಟ್ ಆಕ್ಷೇಪಣೆ ನೆಪ ಒಡ್ಡಿ ಅನುದಾನಗಳನ್ನು ತಡೆಹಿಡಿಯದಿರುವುದು ಅಥವಾ ಬಿಡುಗಡೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ದುರುದ್ವೇಶದಿಂದ ಆಡಿಟ್ ಆಕ್ಷೇಪಣೆ ನೀಡಿ ಜಿಲ್ಲಾಧಿಕಾರಿಗಳ ಕಾರ್ಯಾಲಯಗಳಲ್ಲಿ ಅನುದಾನಗಳನ್ನು ಬಿಡುಗಡೆ ಮಾಡದೆ ಇರುವ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ. | ಇಲ್ಲಾ.<br>ಕೆಲ್ಯಾಡ್ಸ್ ಮಾರ್ಗಸೂಚಿಯ ತಿದ್ದುಪಡಿ ಆದೇಶ ಸಂಖ್ಯೆ:ಯೋಇ 176 ಯೋವಿವಿ 2015 ದಿನಾಂಕ:18.01.2016 ರನ್ವಯ ಟ್ರಸ್ಟ್ ರಡಿ ಕೈಗಳ್ಳುವ ಕಾಮಗಾರಿಗಳಡಿ, ಟ್ರಸ್ಟ್/ಸೊಸೈಟಿಗಳ ಲೆಕ್ಕ ಪತ್ರಗಳು ನಿಯತಕಾಲಿಕವಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ಲೆಕ್ಕ ಪರಿಶೋಧನೆಗೊಳಪಟ್ಟಿರಬೇಕು ಎಂಬ ಷರತ್ತು ಪಾಲಿಸಿರುವುದನ್ನು ದೃಢಪಡಿಸಿಕೊಳ್ಳಲಾಗುತ್ತದೆ. |
| (ಈ) | ಶಾಸಕರು ತಮ್ಮ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಯಾವುದೇ ಕಾಮಗಾರಿಗೆ ಅಥವಾ ಯೋಜನೆಗೆ ಹಣ ನೀಡಿದ್ದಲ್ಲಿ, ಸದರಿ ಹಣ ಬಳಕೆ ಮಾಡದೆ ಹೋದಲ್ಲಿ, ಹಣವನ್ನು ಶಾಸಕರ ಪ್ರದೇಶಾಭಿವೃದ್ಧಿ ನಿಧಿಗೆ ವಾಪಸ್ಸು ನೀಡಬೇಕಾಗಿರುತ್ತದೆ. ಕೆಲವು ಪ್ರಕರಣಗಳಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಖಾತೆಗೆ ಬಳಕೆಯಾಗದ ಅನುದಾನವನ್ನು ಹಿಂದಿರುಗಿಸದೇ ತಪ್ಪನ್ನು ಎಸಗಿರುವ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ. (ವಿವರಗಳನ್ನು ಒದಗಿದುವುದು) | ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಯಾವುದೇ ಕಾಮಗಾರಿಗೆ ಅಥವಾ ಯೋಜನೆಗೆ ಹಣ ನೀಡಿದ್ದಲ್ಲಿ, ಸದರಿ ಹಣ ಬಳಕೆ ಮಾಡದೆ ಹೋದ ಸಂದರ್ಭಗಳ ಕುರಿತು ಪ್ರಕರಣಗಳ ವಿವರಗಳು ಸ್ವೀಕೃತವಾದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುತ್ತದೆ. ಆದರೆ, ಈವರೆವಿಗೆ ಯಾವುದೇ ದೂರು/ಪ್ರಕರಣ ವರದಿಯಾಗಿರುವುದಿಲ್ಲ. |

ಸಂಖ್ಯೆ:ಪಿಡಿಎಸ್-ಕೆಎಲ್ಎಸ್ 41/2026

**(ಡಿ. ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು.